ಈ ದಿನ ದಿನಾಂಕಃ 17-01-2026 ರಂದು ಸಾಕ್ಷಿಯನ್ನು  ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ  ವಾದಿ ಪರ ಶ್ರೀ ಜಿ ಆರ್ ವಕೀಲರಿಂದ</u>**

ವಾದಿ ಪ್ರಸ್ತುತ ದಾವೆಯನ್ನು ಸರ್ವೆ ನಂ 2, 5, 7 ರಿಂದ 9 , 12 ಮತ್ತು 13 ರ ಆಸ್ತಿಗಳಲ್ಲಿ  ಇದ್ದ ರಸ್ತೆಯನ್ನು ಮುಚ್ಚಿದ ಕುರಿತು ಮತ್ತು ಸದರಿ ರಸ್ತೆಯನ್ನು ತೆರವು ಮಾಡಿಕೊಡಬೇಕೆಂದು ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ರಸ್ತೆ ಇಲ್ಲ ಎಂದು ನುಡಿಯುತ್ತಾರೆ.  ಸದರಿ ವಾದಿ ಪ್ರಸ್ತುತ ದಾವೆಯನ್ನು ಯಾವ ಪರಿಹಾರ ಕೋರಿ ಹೂಡಿರುತ್ತಾರೆ ಎಂದರೆ ಸಾಕ್ಷಿ ರಸ್ತೆಗಾಗಿ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ನನ್ನ ಆಸ್ತಿಗೆ ತೊಂದರೆ ಕೊಡುತ್ತಾರೆ ಎಂದು ನಾನು ಅವರ ವಿರುದ್ದ ಅಸಲು ದಾವಾ ನಂ 27/2018 ರಂತೆ ಇದೇ ನ್ಯಾಯಾಲಯದಲ್ಲಿ  ದಾವೆ ಹೂಡಿರುತ್ತೇನೆ ಎಂದರೆ ಸರಿ. ಪ್ರಸ್ತುತ ವಾದಿ ನನಗೆ ಯಾವುದೇ ತೊಂದರೆಕೊಡದೆ ಇದ್ದರು ಸಹ ಈ ದಾವೆಗೆ ಪ್ರತಿಯಾಗಿ ಸದರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ.  ಸದರಿ ದಾವೆಗೆ ಪ್ರತಿಯಾಗಿ ರಂಗಪ್ಪನವರು ಪ್ರಸ್ತುತ ದಾವೆಯನ್ನು ಪ್ರತಿದಾವೆಯಾಗಿ ಹೂಡಿರುತ್ತಾರೆ ಎಂದರೆ ಸರಿಯಲ್ಲ.

2. ಸರ್ವೆ ನಂ 2, 5, 7 ರಿಂದ 9 , 12 ಮತ್ತು 13 ರ ಆಸ್ತಿಗಳಲ್ಲಿ ಇರುವ ರಸ್ತೆಯನ್ನು ಅಳತೆ ಮಾಡುವ ಸಲುವಾಗಿ ತಾಲ್ಲೂಕು ಕಚೇರಿಯಿಂದ ನನಗೆ ಮತ್ತು ಸದರಿ ಸರ್ವೆ ನಂಬರಿನ ಸ್ವಾಧೀನದಾರರಿಗೆ ನಿಪಿ-6 ರಂತೆ ನೋಟಿಸು ಜಾರಿ ಮಾಡಿರುತ್ತಾರೆ ಎಂದರೆ ಸರಿ. ತದನಂತರ ಸದರಿ ತಾಲ್ಲೂಕು ಕಚೇರಿಯವರು ಸ್ಥಳಕ್ಕೆ ಬಂದು ಅಳತೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ಸ್ಥಳಕ್ಕೆ ಬಂದಿದ್ದು ಸದರಿ ಸರ್ವೆ ನಂಬರುಗಳ್ಲಿಯಾವುದೇ ರಸ್ತೆ ಕಂಡುಬರದ ಕಾರಣ ಮತ್ತು ಸದರಿ ಸರ್ವೆ ನಂಬರುಗಳನ್ನು ಸಾಗುವಳಿ ಜಮೀನುಗಳಾಗಿ ಮಾರ್ಪಡಿಸಿದ ಕಾರಣ ಅಳತೆ ಮಾಡದೇ ಹಿಂತಿರುಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅಳತೆ ಕಾರ್ಯದ ಸಮಯಕ್ಕೆ ಪೊಲೀಸರು, ಕಂದಾಯ ಇಲಾಖೆಯವರು ಮತ್ತು ಸದರಿ ಸರ್ವೆ

ನಂಬರಿನ ಖಾತಾದಾರರು ಮತ್ತು ಭೂಮಾಪಕರು ಹಾಜರಿದ್ದರು ಎಂದರೆ ಸರಿಯಲ್ಲ. ಸರ್ವೆ ಇಲಾಖೆಯವರು ಅಳತೆಯನ್ನು ಮಾಡಿ ಜೆ ಸಿ ಬಿ ಸಹಾಯದಿಂದ ಟ್ರಂಚ್ ನ್ನು ಸಹ ರಸ್ತೆಯನ್ನು ತೆರವುಗೊಳಿಸಲು ಮಾಡಿದ್ದರು ಎಂದರೆ ಸರಿಯಲ್ಲ.

3. ಅದೇ ರೀತಿ ತಹಶೀಲ್ದಾರ್ ರವರು ಪೊಲೀಸರ ರಕ್ಷಣೆಯನ್ನು ಕೋರಿ ನಿಪಿ-12 ರಂತೆ ಮನವಿಯನ್ನು ಸಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 06-12-2018 ರಂದು ಸದರಿ ಸರ್ವೆ ನಂಬರುಗಳಲ್ಲಿ ದಾರಿಯನ್ನು ತೆರವುಗೊಳಿಸುವುದಾಗಿ ಸರ್ವೆ ಇಲಾಖೆಯವರು ಸೂಚಿಸಿ ನಮಗೆ ನಿಪಿ-13 ರಂತೆ ನೋಟಿಸನ್ನು ಜಾರಿ ಮಾಡಿದ್ದರು ಎಂದರೆ ಸರಿ. ಅದೇ ರೀತಿ ಸದರಿ ಭೂಮಾಪಕರು ಸದರಿ ದಿನಾಂಕದಂದು ನಕಾಶೆ ಕಂಡ ದಾರಿಯನ್ನು ಗುರುತಿಸಿ ನಕ್ಷೆಯನ್ನು ನಿಪಿ-14 ರಂತೆ ತಯಾರಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಕಾಶೆ ಕಂಡ ದಾರಿ ಇರಬಹುದು ಯಥಾ ಸ್ಥಿತಿಯಂತೆ ಯಾವುದೇ ದಾರಿ ಸದರಿ ಸರ್ವೆ ನಂಬರುಗಳಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-14ರಲ್ಲಿ ನಕಾಶೆ ಕಂಡ ದಾರಿಯನ್ನು ಗುರುತಿಸಿ ನಕ್ಷೆತಯಾರಿಸಿ ಹೇಳಿಕೆ ಮತ್ತು ನೋಟಿಸಿನೊಂದಿಗೆ ಕಡತವನ್ನು ಲಗತ್ತಿಸಿದೆ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಿಪಿ-14 ರಲ್ಲಿ ಉಲ್ಲೇಖವಿದೆ ಎಂದು ನುಡಿಯುತ್ತಾರೆ.

4. ನಿಪಿ-21ರಲ್ಲಿ ಗುರುತಿಸಲ್ಪಟ್ಟ 5 ಫೊಟೋಗಳಲ್ಲಿ ನನಗೆ ಸೇರಿದ ಯಾವುದೂ ಹೊಲವಿಲ್ಲ. ಸದರಿ 5 ಫೊಟೋಗಳಲ್ಲಿ 4ನೇ ಭಾವಚಿತ್ರದಲ್ಲಿ 2 ಕಡೆ ನಾಟಿ ಮಾಡಿರುವ ಜಮೀನುಗಳ ಮಧ್ಯೆ ಇರುವ ದಾರಿಯನ್ನು ಭೂಮಾಪಕರು ಅಳತೆ ಮಾಡಿ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಟಾರ್ ರಸ್ತೆ ಇದೆ. ನಂತರ ಸಾಕ್ಷಿ ಉತ್ತರ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ನಿಪಿ-21ರ ಮೊದಲನೇ ಭಾವಚಿತ್ರದಲ್ಲಿ ಕಾಣಿಸುತ್ತಿರುವ ರಸ್ತೆಯೇ ದೊಡ್ಡಫಟ್ಟ ರಸ್ತೆ ಎಂದರೆ ಸರಿ. ಸರ್ವೆ ಇಲಾಖೆಯವರು ಸದರಿ ಸರ್ವೆ ನಂಬರುಗಳಲ್ಲಿ ಟಾರ್ ರಸ್ತೆಯಿಂದ ಜಮೀನುಗಳಲ್ಲಿ ಹಾದುಹೋಗಿರುವ ರಸ್ತೆಯನ್ನು ತೆರವುಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

5. ನಾನು ನಿವೃತ್ತ ಗ್ರಾಮ ಲೆಕ್ಕಾಧಿಕಾರಿಗಳು ಎಂದರೆ ಸಾಕ್ಷಿ ಪಂಚಾಯತಿ ಕಾಯದರ್ಶಿಯಾಗಿದ್ದೆ ಎಂದು ನುಡಿಯುತ್ತಾರೆ. ಹಾಗಾಗಿ ನನಗೆ ಕಂದಾಯ ಇಲಾಖೆಯ ದಾಖಲೆಗಳ ಕುರಿತು ಮಾಹಿತಿ ಇದೆ ಎಂದರೆ ಸರಿಯಲ್ಲ. ನನಗೆ ಕಂದಾಯ ಇಲಾಖೆಯ ದಾಖಲೆಗಳ ಕುರಿತು ಮಾಹಿತಿ ಇದೆ ಎಂದರೆ ಸರಿಯಲ್ಲ. ಭೂದಾಖಲೆಗಳ ಉಪನಿರ್ದೇಶಕರು, ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ನನಗೆ ನಿಪಿ-33 ರಂತೆ ನೋಟಿಸು ಜಾರಿಯಾಗಿತ್ತು ಎಂದರೆ ಸರಿಯಲ್ಲ. ನಾನು ಸರ್ವೆ ನಂ 9 ರಲ್ಲಿ ಸ್ವಾಧೀನದಲ್ಲಿದ್ದೆನೆ ಎಂದರೆ ಸಾಕ್ಷಿ ಸರ್ವೆ ನಂ 8/7ರಲ್ಲಿದ್ದೆನೆ ಎಂದು ನುಡಿಯುತ್ತಾರೆ. ನಿಪಿ-33 ರಲ್ಲಿ ಏನೆಂದು ಆದೇಶವಾಗಿದೆ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಲು ನಿರಾಕರಿಸಿರುತ್ತಾರೆ. ಸರ್ವೆ ನಂ 9 ಮತ್ತು 10 ಕ್ಕೆ ಸಂಬಂಧಿಸಿದಂತೆ 1 ಮತ್ತು 2 ನೇ ಪ್ರತಿವಾದಿಗಳು ವಾದಿಯ ವಿರುದ್ಧ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಶ್ರೀ ಹರಿ ಮತ್ತು ಮುರಳೀಧರ ನನ್ನ ಸಂಬಂಧಿಕರು ಎಂದರೆ ಸರಿ. ಇದೇ ನ್ಯಾಯಾಲಯದಲ್ಲಿ ಸದರಿ ಸರ್ವೆ ನಂಬರುಗಳ ವಿಚಾರವಾಗಿ ವಾದಿಗಳ ವಿರುದ್ಧ ಸದರಿ ಪ್ರತಿವಾದಿಗಳು ಅಸಲು ದಾವಾ ನಂ 27/2018ರಂತೆ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಹಾಕಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಇದೇ ನ್ಯಾಯಾಲಯ ವಜಾ ಮಾಡಿರುತ್ತದೆ ಎಂದಗೆ ನನಗೆ ಗೊತ್ತಿಲ್ಲ.

5. ತಹಶೀಲ್ದಾರ್ ಕಚೇರಿಯಿದಸ ರ್ವೆಯರ್ ಬಂದು ಸದರಿ ಸರ್ವೆ ನಂಬರುಗಳಲ್ಲಿನ ಮುಚ್ಚಿದ ನಕಾಶೆ ಕಂಡ ದಾರಿಯನ್ನು ತೆರವುಗೊಳಿಸಿದರು ಎಂದರೆ ಸರಿಯಿಲ್ಲ. ಸದರಿ ರಸ್ತೆಯನ್ನು ತೆರಿವುಗೊಳಿಸುವ ಸಮಯಕ್ಕೆ ಎಲ್ಲಾ ಇಲಾಖೆಯವರು ಹಾಜರಿದ್ದರು ಎಂದರೆ ಸರಿಯಲ್ಲ. ಸರ್ವೆ ಇಲಾಖೆಯರು ಸದರಿ ರಸ್ತೆಯನ್ನು ತೆರವುಗೊಳಿಸಿದ ತರುವಾಯ ನಾವುಪುನಃ ಸದರಿ ತೆರವು ಗೊಳಿಸಿದದಾರಿಯನ್ನು ಸಾಗುವಳಿಗೆ ಬಳಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ 2 ರಿಂದ 13 ವರೆಗೂ ಮಾಡಿದ ದಾರಿಯಲ್ಲಿ ಸರ್ವೆ ನಂ 7 ರಿಂದ 10 ಸರ್ವೆ ನಂಬರಿನ ಖಾತೆದಾರರು ಸದರಿ ದಾವೆಯನ್ನು ಮುಚ್ಚಿದ್ದು ಉಳಿದ ಜಮೀನುಗಳ ದಾರಿ ಈಗಲೂ ಸಹ ಸದರಿ ದಾರಿ

ಇದೆ  ಎಂದರೆ ಸರಿಯಲ್ಲ. ನಾನು ಸದರಿ ತೆರವುಗೊಳಿಸಿದ ದಾರಿಯನ್ನು  ಮುಚ್ಚಿದ್ದರು ಸಹ ನನ್ನ ಸಾಗುವಳಿ ಜಮೀನನ್ನು  ರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯತ್ತಿದ್ದೆನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.